# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **772** |
| ಸದಸ್ಯರ ಹೆಸರು | : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : **22.02.2023.** |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹೊಸಕೋಟೆ ತಾಲ್ಲೂಕಿನ ಚೋಳಪ್ಪನ ಹಳ್ಳಿಯ ಗ್ರಾಮದ ಸರ್ವೆ ನಂ.118 (ಹಳೆ ಸರ್ವೆ ನಂ.80) ರಲ್ಲಿನ ಒಂದು ಎಕರೆ ಇಪ್ಪತ್ತು ಗುಂಟೆ ಜಮೀನನ್ನು ದಿನಾಂಕ:08.05.1987 ರಲ್ಲಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎಲ್ ಪಿಎಸ್ಆರ್:144/1986-87 ರ ಪ್ರಕಾರ ಕೈಗಾರಿಕಾ ಉದ್ದೇಶಕ್ಕಾಗಿ ತಹಶೀಲ್ದಾರ್ ರವರು ಭೂಪರಿವರ್ತನೆ ಮಂಜೂರು ಮಾಡಿರುವುದು ನೈಜತೆಯಿಂದ ಕೂಡಿದೆಯೇ; | ಹೊಸಕೋಟೆ ತಾಲ್ಲೂಕು ಕಸಬಾ ಹೋಬಳಿ ಚೋಳಪ್ಪನಹಳ್ಳಿಯ ಗ್ರಾಮದ ಸ.ನಂ.118 (ಹಳೇ ಸ.ನಂ.80) ರಲ್ಲಿನ 1-20 ಎಕರೆ/ಗುಂಟೆ ಜಮೀನನ್ನು ದಿನಾಂಕ: 08-05-1987 ರಲ್ಲಿ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಎ.ಎಲ್ .ಪಿ.ಎಸ್.ಆರ್.144/1986-87ರ ಪ್ರಕಾರ ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿರುವ ಬಗ್ಗೆ ಯಾವುದೇ ಕಡತವು ತಹಶೀಲ್ದಾರ್ ಕಛೇರಿಯಲ್ಲಿ ಲಭ್ಯವಿರುವುದಿಲ್ಲ ಹಾಗೂ ಮೇಲ್ಕಂಡ ಅವಧಿಯ ಭೂ ಪರಿವರ್ತನೆ ವಹಿಯನ್ನು ಪರಿಶೀಲಿಸಲಾಗಿ ಮೇಲ್ಕಂಡ ಆದೇಶ ಸಂಖ್ಯೆ ಯಾವುದೇ ನಮೂದುಗಳು ಕಂಡುಬಂದಿರುವುದಿಲ್ಲ. |
| ಆ) | ತಹಶೀಲ್ದಾರ್ ರವರು ಭೂ ಪರಿವರ್ತನೆ ಆದೇಶ ಮಾಡಲು ಅಧಿಕಾರ ಹೊಂದಿರುವರೇ; (ಕೈಗಾರಿಕಾ ಉದ್ದೇಶಕ್ಕಾಗಿ ಸದರಿ ಜಮೀನನ್ನು ಭೂಪರಿವರ್ತನೆ ಮಾಡಲು ಕೋರಿದ ಅರ್ಜಿ, ಅರ್ಜಿದಾರರ ವಿವರ ಹಾಗೂ ಭೂಪರಿವರ್ತನೆ ಖಾತೆ ಮಾಡಿಸಲು ಗ್ರಾಮ ಪಂಚಾಯಿತಿಗೆ ಮನವಿ ನೀಡಿರುವ ಅರ್ಜಿ ಹಾಗೂ ಅರ್ಜಿದಾರರ ವಿವರವನ್ನು ನೀಡುವುದು) | ಮೇಲ್ಕಂಡ ಭೂಪರಿವರ್ತನೆಯಾಗಿರುವ ಸಾಲಿನ ಅವಧಿಯಲ್ಲಿ ತಹಶೀಲ್ದಾರ್ ರವರೇ ಭೂಪರಿವರ್ತನೆ ಮಾಡುವ ಸಕ್ಷಮ ಪ್ರಾಧಿಕಾರಿಯಾಗಿದ್ದು, ಪ್ರಸ್ತುತ ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ಆದೇಶ ಮಾಡುವ ಸಕ್ಷಮ ಪ್ರಾಧಿಕಾರವಾಗಿರುತ್ತಾರೆ.<br><br>ಭೂ ಪರಿವರ್ತನೆ ಮಾಡಿರುವ ಬಗ್ಗೆ ಯಾವುದೇ ಕಡತವು ತಹಶೀಲ್ದಾರ್ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. |
| ಇ) | ಸರ್ವೆ ನಂ.118ರ ಭೂ ಮಂಜೂರುದಾರರು ಯಾರು; ಸದರಿಯವರು ಭೂ ಮಂಜೂರಾತಿ ವರ್ಷದಿಂದ ಸ್ಥಳದಲ್ಲಿ ಇಲ್ಲದೆ ವ್ಯವಸಾಯ ಮಾಡದಿರುವ ಬಗ್ಗೆ ಹಾಗೂ ಸದರಿಯವರು ಗ್ರಾಮಸ್ಥರಲ್ಲದಿರುವುದರ ಬಗ್ಗೆ ದೂರುಗಳು ತಹಶೀಲ್ದಾರರಿಗೆ ಬಂದಿದ್ದರೂ ಸಹ ಗ್ರಾಮಸ್ಥರ | ಚೋಳಪ್ಪನಹಳ್ಳಿ ಗ್ರಾಮದ ಸ.ನಂ.80 ಮೂಲತಃ ಗೋಮಾಳ ಜಮೀನಾಗಿರುತ್ತದೆ.<br><br>ಎಲ್.ಎನ್.ಡಿ/ಎಸ್.ಆರ್:1/24/77-78 ದಿನಾಂಕ: 27.09.1978 ರ ಅಧಿಕೃತ ಜ್ಞಾಪನದಂತೆ (31-20 ಎಕರೆ/ಗುಂಟೆ) ಜಮೀನು 21 ಜನರಿಗೆ ಮಂಜೂರಾತಿಯಾಗಿರುವುದು ದಾಖಲೆಗಳಿಂದ ಕಂಡು ಬಂದಿರುತ್ತದೆ. ಈ ಪೈಕಿ ಸೈಯದ್‌ಅಮೀರ್‌ರವರಿಗೆ 1-20ಎಕರೆ/ಗುಂಟೆ ಜಮೀನು ಮಂಜೂರಾತಿಯಾಗಿರುತ್ತದೆ. |

| | | |
|---|---|---|
| | ಸಮ್ಮುಖದಲ್ಲಿ ಸ್ಥಳ ಪರಿಶೀಲನೆ ಮಾಡದೆ ಭೂಮಾಪಕರು ಹಾಗೂ ಸಿಬ್ಬಂದಿಗಳು ತಪ್ಪು ಮಾಹಿತಿ ನೀಡುವುದರ ಮೂಲಕ ಸ್ಥಳೀಯರಿಂದ ಸಹಿ ಪಡೆದು ತಪ್ಪು ವರದಿ ಮೇಲೆ ಪೋಡಿ ಮಾಡಿರುವುದರಿಂದ ಸರ್ವೆ ನಂ.118ರ ಪೋಡಿ ಪ್ರಕ್ರಿಯೆಯನ್ನು ಹಿಂಪಡೆದು ನ್ಯಾಯ ಸಮ್ಮತವಾಗಿ ಪೋಡಿ ಪ್ರಕ್ರಿಯೆಯನ್ನು ಗ್ರಾಮಸ್ಥರಿಂದ, ಸ್ಥಳೀಯರಿಂದ ವರದಿ ಪಡೆದು ಸರ್ವೆ ನಂ.118ರ ಕುರಿತು ಪುನಃ ಪೋಡಿ ಮಾಡಿಸಲು ಸರ್ಕಾರ ಕ್ರಮ ಜರುಗಿಸುವುದೇ; (ಪೋಡಿ ಮತ್ತು ಕ್ರಮದ ವಿವರ ಒದಗಿಸುವುದು) | ನಂತರ ಆರ್.ಆರ್.ಟಿ/ಸಿಆರ್:60/1988-89 ದಿನಾಂಕ: 09.03.1990 ರಂತೆ ಮಂಜೂರಾತಿ ವಜಾ ಮಾಡಿರುವ ಆದೇಶವನ್ನು ಪ್ರಶ್ನಿಸಿ ಬಾಧಿತರು ಘನ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಕೊಂಡು ಪರಿಹಾರ ಕಂಡುಕೊಂಡಿರುತ್ತಾರೆ. (ಡಬ್ಲ್ಯೂ.ಪಿ:18436/2005, ದಿನಾಂಕ: 09.04.2007, ಡಬ್ಲ್ಯೂ.ಪಿ:14769/2007, ದಿನಾಂಕ: 12.10.2007, ಡಬ್ಲ್ಯೂ.ಪಿ:6570/2007) ಸರ್ಕಾರದ ವಿರುದ್ಧ ಆದೇಶವಾದ್ದರಿಂದ ಸರ್ಕಾರದ ವತಿಯಿಂದ ರಿಟ್ ಅಪೀಲು ನಂ. 391/2008 (ಕೆಎಲ್.ಆರ್-ಆರ್.ಇ.ಎಸ್) ರಂತೆ ಮೇಲ್ಮನವಿ ಸಲ್ಲಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ದಿನಾಂಕ: 17.07.2008 ರಂದು ಅಪೀಲನ್ನು ಮಾನ್ಯ ಉಚ್ಚನ್ಯಾಯಾಲಯವು ವಜಾ ಮಾಡಿರುತ್ತದೆ.<br><br>ಅದೇ ರೀತಿಯಾಗಿ ಸೈಯದ್‌ಅಮೀರ್ ಬಿನ್ ಸೈಯದ್ ಮೊಹಿದ್ದೀನ್ ರವರು ಆರ್.ಆರ್.ಟಿ/ಸಿಆರ್:60/1988-89 ದಿನಾಂಕ: 09.03.1990ಮಂಜೂರಾತಿ ವಜಾ ಆದೇಶ ಪ್ರಶ್ನಿಸಿ, ರಿಟ್ ಪಿಟಿಷನ್ ನಂ: 24048/2009 ರಂತೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ದಿನಾಂಕ: 03.11.2009 ರಂದು ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ರವರ ದಿನಾಂಕ: 09.03.1990ರ ಆದೇಶವನ್ನು ವಜಾ (Quash) ಮಾಡಿರುತ್ತದೆ. ಆದ್ದರಿಂದ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲ್ಯೂ.ಪಿ: 24048/2009 ದಿನಾಂಕ: 03.11.2009 ರಂತೆ ಎಂ.ಆರ್:15/2009-10 ರಂತೆ ಸೈಯದ್ ಅಮೀರ್ ಬಿನ್ ಸೈಯದ್ ಮೊಹಿದ್ದೀನ್ ರವರ ಹೆಸರಿಗೆ ಚೋಳಪ್ಪನಹಳ್ಳಿ ಗ್ರಾಮದ ಸ.ನಂ.80 ರಲ್ಲಿ 1-20 ಎಕರೆ/ಗುಂಟೆಜಮೀನಿನ ಖಾತೆದಾಖಲಿಸಲಾಗಿರುತ್ತದೆ.<br><br>ಸೈಯದ್ ಅಮೀರ್ ರವರು ದಿನಾಂಕ: 22.11.2018 ರಂದು ತಹಶೀಲ್ದಾರ್ ಕಛೇರಿಗೆ ಮನವಿ ಸಲ್ಲಿಸಿ ಪೋಡಿ ದುರಸ್ತಿ ಮಾಡಿಕೊಡಬೇಕೆಂದು ಕೋರಿರುತ್ತಾರೆ. ರಾಜಸ್ವ ನಿರೀಕ್ಷಕರು ಕಸಬಾ ಹೋಬಳಿ ರವರು ರಾ\|\|ನಿ(ಕ2)ಪಿಆರ್:392/18-19 ರಂತೆ ವರದಿ ಸಲ್ಲಿಸಿರುತ್ತಾರೆ. ತಕರಾರು ಅರ್ಜಿ ಸ್ವೀಕೃತವಾಗಿದ್ದರಿಂದ ಸೈಯದ್ ಅಮೀರ್‌ರವರ ಮನವಿಯನ್ನು ಪರಿಗಣಿಸದೇ ಇದ್ದುದರಿಂದ ದಿನಾಂಕ: 26.06.2019 ರಂದು ಮತ್ತೊಮ್ಮೆ ಮನವಿ ಸಲ್ಲಿಸಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ರೀತ್ಯಾ ಖಾತೆ ದಾಖಲಾಗಿದ್ದು, ಪೋಡಿ ಮಾಡದೇ ಹೋದಲ್ಲಿ ನ್ಯಾಯಾಲಯದ ಮೊರೆ ಹೋಗಬೇಕಾಗಿರುತ್ತದೆಂದು ತಿಳಿಸಿ ಪೋಡಿ ದುರಸ್ತಿ ಮಾಡಿಕೊಡಲು ಕೋರಿರುತ್ತಾರೆ. |

| | | |
|---|---|---|
| | | ಆದ್ದರಿಂದ ದಿನಾಂಕ: 22.07.2019 ರಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಹೊಸಕೋಟೆ ತಾಲ್ಲೂಕುರವರಿಗೆ ಪತ್ರ ಬರೆದು ಸ್ಥಳದಲ್ಲಿ ತಕರಾರು ಇಲ್ಲದಿದ್ದಲ್ಲಿ ನಿಯಮಾನುಸಾರ ಪೋಡಿ ದುರಸ್ತಿ ಮಾಡಲು ಪೂರ್ವಾನುಮತಿಯನ್ನು ನೀಡಲಾಗಿರುತ್ತದೆ.<br><br>ಪ್ರಸ್ತಾಪಿತ ವಿಚಾರವಾಗಿ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಹೊಸಕೋಟೆ ತಾಲ್ಲೂಕು ರವರು ತಹಶೀಲ್ದಾರ್ ಕಛೇರಿಗೆ ದಿನಾಂಕ: 13.04.2020 ರಂದು ಪತ್ರ ಬರೆದು ಅರ್ಜಿದಾರರು ಅನುಭವ ಉಡಾಫೆ ನಂಬರ್ 111ರಲ್ಲಿ ಬರುತ್ತಿದ್ದಲ್ಲಿ, ಪೋಡಿ ದುರಸ್ತಿ ಮಾಡುವ ಬಗ್ಗೆ ತಿದ್ದುಪಡಿ ಅಧಿಕೃತ ಜ್ಞಾಪನ ಹೊರಡಿಸಬೇಕಾಗಿರುತ್ತದೆ ಮತ್ತು ತಕರಾರು ಇತ್ಯರ್ಥಪಡಿಸಿ ಸೂಕ್ತ ಆದೇಶ ಮಾಡಿ ಕಳುಹಿಸಿಕೊಡಲು ಕೋರಿರುತ್ತಾರೆ.<br><br>ಆದ್ದರಿಂದ ಈ ಬಗ್ಗೆ ರಾಜಸ್ವ ನಿರೀಕ್ಷಕರು ಮತ್ತುಗ್ರಾಮ ಆಡಳಿತಾಧಿಕಾರಿಗಳಿಂದ ವರದಿ ಪಡೆಯಲಾಗಿರುತ್ತದೆ. ಗ್ರಾಮಸ್ಥರ ಮಹಜರ್ ಮಾಡಿದ್ದು, ಗ್ರಾಮಸ್ಥರು ಸ.ನಂ.80ರಲ್ಲಿ ಪೋಡಿಯಾಗಿರುವ ಉಡಾಫೆ ನಂಬರ್ 111ರಲ್ಲಿ 1-17 ಎಕರೆ/ಗುಂಟೆ ಪೈಕಿ 1-08 ಎಕರೆ/ ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿ ಇರುತ್ತಾರೆಂದು ತಿಳಿಸಿ ಪೋಡಿ ದುರಸ್ತಿಪಡಿಸಲು ತಂಟೆ ತಕರಾರು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಪಹಣಿ ಕಾಲಂ 3 ಮತ್ತು 9ಕ್ಕೆ ತಾಳೆ ಮಾಡುವ ಸಂಬಂಧ ಉಪವಿಭಾಗಾಧಿಕಾರಿಗಳಿಂದ ಆರ್.ಎ(ಹೊ) 38/2020, ದಿನಾಂಕ:24.02.2020 ರಂತೆ ಆದೇಶ ಪಡೆದು 1-20 ಎಕರೆ/ಗುಂಟೆ ವಿಸ್ತೀರ್ಣವನ್ನು 1-08 ಎಕರೆ/ಗುಂಟೆಎಂದು ಎಂಆರ್.ಹೆಚ್10/2019-20 ರಂತೆ ವಿಸ್ತೀರ್ಣ ತಿದ್ದುಪಡಿ ಮಾಡಲಾಗಿರುತ್ತದೆ. ದಿನಾಂಕ: 06.02.2021 ರಂತೆ ಅಧಿಕೃತಜ್ಞಾಪನ ಹೊರಡಿಸಿ ಉಡಾಫೆ ನಂಬರ್ 111 ರಲ್ಲಿ ಪೋಡಿ ದುರಸ್ತಿ ಪಡಿಸಲು ಅಗತ್ಯ ಕ್ರಮಕೈಗೊಳ್ಳಲು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಹೊಸಕೋಟೆ ರವರಿಗೆ ತಿಳಿಯಪಡಿಸಲಾಗಿರುತ್ತದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ಪೋಡಿ ದುರಸ್ತಿ ಬಾಬ್ತು ದಿನಾಂಕ: 12.03.2021 ರಂದು ಕ್ರಮಕೈಗೊಂಡಿದ್ದು, ದಿನಾಂಕ: 31.03.2021 ರಂತೆ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪನಿರ್ದೇಶಕರು ಆಕಾರಬಂದ್ ದಾಖಲೆಗಳಿಗೆ ಮೇಲು ಸಹಿ ಮಾಡಿ ಇಂಡೀಕರಣ ಮಾಡುವ ಬಗ್ಗೆ ಕಡತವನ್ನು ಭೂದಾಖಲೆಗಳ ಸಹಾಯಕ ನಿರ್ದೇಶಕರವರ ಕಛೇರಿಗೆ ಹಿಂದಿಗಿಸಿರುತ್ತಾರೆ. ನಂತರ ಭೂದಾಖಲೆಗಳ ಸಹಾಯಕ ನಿರ್ದೇಶಕರು ದಿನಾಂಕ: 05.04.2021 ರಂತೆ ತಹಶೀಲ್ದಾರ್ ಕಛೇರಿಗೆ ದಾಖಲೆಗಳಾದ ಆಕಾರಬಂದ್, ಪೋಡಿ ನಕ್ಷೆ ಮತ್ತು ತಃಖ್ತೆ ದಾಖಲೆಗಳನ್ನು |

| | | |
|---|---|---|
| | | ಸಲ್ಲಿಸಿ ಹೊಸ ನಂಬರ್ 118ನ್ನು ಪಹಣಿ ಇಂಡೀಕರಣ ಮಾಡುವ ಬಗ್ಗೆ ಕೋರಿರುವುದರಿಂದ ಅದರಂತೆ ಎಂ.ಆರ್.ಟಿ10/20-21 ರಂತೆ ಸೈಯದ್ ಅಮೀರ್ ಬಿನ್ ಸೈಯದ್ ಮೋಹಿದ್ದೀನ್‌ರವರ ಹೆಸರಿನಲ್ಲಿ ಹೊಸ ಸ.ನಂ.118 ರಲ್ಲಿ 1-08 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಪಹಣಿ ಇಂಡೀಕರಣ ಮಾಡಲಾಗಿರುತ್ತದೆ. ನಂತರ ಮಂಜೂರಿದಾರರಾದ ಸೈಯದ್ ಅಮೀರ್ ಬಿನ್ ಸೈಯದ್ ಮೊಹಿದ್ದೀನ್ ರವರು ಹೆಚ್.ಎಸ್.ಕೆ-1-01096/2021-22 ದಿನಾಂಕ: 04.05.2021 ರಂತೆ ಹೆಚ್.ಎಸ್.ಪ್ರದೀಪ್ ಬಾಬು ಬಿನ್ ಹೆಚ್.ವಿ.ಸುರೇಶ್ ಬಾಬು ರವರಿಗೆ ಕ್ರಯ ಮಾಡಿರುವ ಮೇರೆಗೆ ಎಂ.ಆರ್.ಹೆಚ್.31/2020-21 ರಂತೆ ಕ್ರಯದಾರರರ ಹೆಸರಿಗೆ ಖಾತೆ ದಾಖಲಾಗಿ ತಹಲ್ವರೆವಿಗೂ ಮುಂದುವರೆದಿರುತ್ತದೆ.<br><br>ಭೂ ಮಂಜೂರಿದಾರರು ಸೈಯದ್ ಅಮೀರ್ ಬಿನ್ ಸೈಯದ್ ಮೊಹಿದ್ದೀನ್ ರವರುಆಗಿರುತ್ತಾರೆ. ಪೋಡಿ ದುರಸ್ತಿಯಿಂದ ಬಾಧಿತರಾದವರು ಜೆ.ಡಿ.ಎಲ್.ಆರ್ (ಮೇಲ್ಮನವಿ ಪ್ರಾಧಿಕಾರ) ರವರಲ್ಲಿ ಮೇಲ್ಮನವಿ ಸಲ್ಲಿಸಿಕೊಂಡು ಪರಿಹಾರ ಕಂಡುಕೊಳ್ಳಬಹುದಾಗಿರುತ್ತದೆ. |
| ಈ) | ಭೂ ಮಂಜೂರುದಾರರು ಹಲವಾರು ದಶಕಗಳಿಂದ ಸ್ಥಳದಲ್ಲೇ ವ್ಯವಸಾಯ ಮಾಡದಿರುವುದರಿಂದ ಭೂ ಮಂಜೂರಾತಿ ಕಾಯ್ದೆ ಹಾಗೂ ಅದಕ್ಕೆ ಸಂಬಂಧಪಟ್ಟ ಇತರೆ ಕಾಯ್ದೆ ಹಾಗೂ ಸರ್ಕಾರಿ ಸುತ್ತೋಲೆಗಳ ಪ್ರಕಾರ ಭೂ ಮಂಜೂರಾತಿ ಹಕ್ಕು ವ್ಯವಸಾಯ ಮಾಡದಿರುವ ಭೂ ಮಂಜೂರುದಾರರಿಗೆ ಭೂ ಮಂಜೂರಾತಿ ಹಕ್ಕು ಅಸ್ತಿತ್ವದಲ್ಲಿರುತ್ತದೆಯೇ? (ಸಂಬಂಧಪಟ್ಟ ನಿಯಮಗಳನ್ನು ಹಾಗೂ ವಿವರಗಳನ್ನು ನೀಡುವುದು) | ಭೂಮಂಜೂರಾತಿ ನಿಯಮಗಳ ವಿರುದ್ಧವಾಗಿ ಮಂಜೂರಾತಿಯನ್ನು ಪಡೆದಿರುವ ಪ್ರಕರಣಗಳಲ್ಲಿ ಕರ್ನಾಟಕ ಭೂಕಂದಾಯ ನಿಯಮಗಳು 1966ರ ನಿಯಮ 108ಕೆ ರಡಿಯಲ್ಲಿ ಮಂಜೂರಾತಿಯನ್ನು ರದ್ದುಪಡಿಸಿ ಸರ್ಕಾರಕ್ಕೆ ಮರುಸ್ವಾಧೀನ ಪಡೆಯಲು ಅವಕಾಶವಿರುತ್ತದೆ. |

ಸಂಖ್ಯೆ: ಆರ್‌ಡಿ 41 ಎಲ್‌ಜಿಕ್ಯೂ 2023

(ಆರ್.ಅಶೋಕ)
ಕಂದಾಯ ಸಚಿವರು